ಹೇಳಿದ್ದಾರೆ. ನಿರ್ದಿಷ್ಟವಾಗಿ ಎಲ್ಲಿ ತೊಂದರೆ ಇದೆ ಎನ್ನುವ ಬಗ್ಗೆ ಬರೆದುಕೊಡಿ. ಅಲ್ಲಿ ತಕ್ಷಣವೇ, ಅಂದರೆ 24 ಗಂಟೆಗಳಲ್ಲಿ ಕುಡಿಯುವ ನೀರು ಕೊಡತಕ್ಕಂಥ ವ್ಯವಸ್ಥೆಯನ್ನು ನಾನು ಮಾಡುತ್ತೇನೆ. ಅದನ್ನು ಬಿಟ್ಟು, ಇಡೀ ತಾಲ್ಲೂಕಿನಲ್ಲಿ ನೀರಿನ ಅಭಾವವಿದೆ ಎಂದು ಜನರಲ್ ಆಗಿ ಕೇಳಿದರೆ ನಾನು ಹೇಗೆ ಉತ್ತರ ಕೊಡಲಿ. ಅದಕ್ಕೆ ಜನರಲ್ ಉತ್ತರ ಹೇಳಬೇಕಾಗುತ್ತದೆ. ಮಾನ್ಯ ಸದಸ್ಯರ ಪ್ರಶ್ನೆಯಲ್ಲಿ, ಇಂಥಿಂಥ ಗ್ರಾಮಗಳಲ್ಲಿ ಕುಡಿಯುವ ನೀರಿನ ಅಭಾವವಿದೆ, ತಕ್ಷಣ ಕುಡಿಯುವ ನೀರನ್ನು ಒದಗಿಸಬೇಕು, ಕೊಳವೆ ಬಾವಿಗಳು ಬೇಕು, ಬೋರ್‌ವೆಲ್‌ಗಳು ಬೇಕು ಎಂದು ನಿರ್ದಿಷ್ಟವಾಗಿಲ್ಲ. ಸ್ಪೆಸಿಫಿಕ್ ಆಗಿ ಕೇಳಿದ್ದರೆ ನಾನು ತಕ್ಷಣ ಉತ್ತರಕೊಟ್ಟು ಅದಕ್ಕೆ ವ್ಯವಸ್ಥೆಯನ್ನು ಮಾಡುತ್ತಿದ್ದೆ. ತುರುವೇಕೆರೆಯಲ್ಲಿ ಕುಡಿಯುವ ನೀರಿನ ವ್ಯವಸ್ಥೆಗೆ ಏನೇನು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ ಎನ್ನತಕ್ಕಂಥಾದ್ದರ ಬಗ್ಗೆ ಮಾತ್ರ ನಾನು ವಿವರಗಳನ್ನು ಕೊಟ್ಟಿದ್ದೇನೆ. ಯಾವ ಗ್ರಾಮಗಳಿಗೆ ತುರ್ತಾಗಿ ಕುಡಿಯುವ ನೀರಿನ ವ್ಯವಸ್ಥೆ ಬೇಕು ಎನ್ನುವುದನ್ನು ಮಾನ್ಯ ಸದಸ್ಯರು ಬರೆದು ಕೊಡಲಿ. ತಕ್ಷಣ ಅದರ ವ್ಯವಸ್ಥೆಯನ್ನು ಮಾಡತಕ್ಕಂಥ ಜವಾಬ್ದಾರಿಯನ್ನು ಸರ್ಕಾರ ತೆಗೆದುಕೊಳ್ಳುತ್ತದೆ ಎನ್ನುವ ಮಾತನ್ನು ಹೇಳಲು ಇಚ್ಛಿಪಡುತ್ತೇನೆ.

ಶ್ರೀ ಎಂ.ಡಿ ಲಕ್ಷ್ಮೀನಾರಾಯಣ :- ತಕ್ಷಣವೇ ಕ್ರಮ ತೆಗೆದುಕೊಳ್ಳುತ್ತೇನೆಂದರು ಮಾನ್ಯ ಮಂತ್ರಿಗಳು ಹೇಳುತ್ತಿದ್ದಾರೆ. ಅದಕ್ಕಾಗಿ ಅವರಿಗೆ ನನ್ನ ಧನ್ಯವಾದಗಳು. ಆದರೆ ಅಭಾವ ಪರಿಹಾರ ಕಾರ್ಯಕ್ರಮದಡಿಯಲ್ಲಿ ಮಂಜೂರಾಗಿರುವ ಗ್ರಾಮಗಳು 35 ಎನ್ನುವ ಮಾತನ್ನು ಮಂತ್ರಿಗಳು ಹೇಳಿದ್ದಾರೆ. ಈ 35 ಗ್ರಾಮಗಳನ್ನು ಸುಮಾರು ಒಂದೂವರೆ ವರ್ಷಗಳ ಹಿಂದೆಯೇ ಗುರುತಿಸಲಾಗಿದೆ. 24 ಗಂಟೆಗಳಲ್ಲಿ ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಈಗಾಗಲೇ ಮಂಜೂರಾಗಿರುವ 35 ಗ್ರಾಮಗಳಿಗೆ ದಯಮಾಡಿ 24 ಗಂಟೆಗಳೊಳಗೆ ಕುಡಿಯುವ ನೀರನ್ನು ಒದಗಿಸಲು ಕ್ರಮ ತೆಗೆದುಕೊಂಡರೆ ತಮ್ಮ ಮೂಲಕ ಅವರಿಗೆ ನಾನು ಅನೇಕಾನೇಕ ವಂದನೆಗಳನ್ನು ನಮ್ಮ ತಾಲ್ಲೂಕಿನ ಜನರ ಪರವಾಗಿ ಅರ್ಪಿಸುತ್ತೇನೆ.

ಶ್ರೀ ಕೆ.ಬಿ. ಕೋಳಿವಾಡ್ :- ಸನ್ಮಾನ್ಯ ಅಧ್ಯಕ್ಷರೇ, ನಾನು ಹೇಳಿದ್ದು ನಿಜ. ಸನ್ಮಾನ್ಯ ಸದಸ್ಯರು ಗಮನಕ್ಕೆ ತೆಗೆದುಕೊಳ್ಳಬೇಕು, ಮಂಜೂರಾಗಿರುವ ಗ್ರಾಮಗಳ ವಿವರಗಳನ್ನು ನಾನು ಹೇಳಿದ್ದೇನೆ. ಇವುಗಳಲ್ಲಿ ಯಾವ ಗ್ರಾಮಗಳಲ್ಲಿ ಕಾರ್ಯ ಪ್ರಾರಂಭವಾಗಿಲ್ಲ ಎನ್ನುವುದನ್ನು ನನ್ನ ಗಮನಕ್ಕೆ ತಂದದ್ದಾದರೆ ನಾನು ತಕ್ಷಣವೇ ಕ್ರಮ ತೆಗೆದುಕೊಳ್ಳುತ್ತೇನೆ.

ತೀರ್ಥಹಳ್ಳಿಯ ತುಂಗಾ ಮಹಾವಿದ್ಯಾಲಯದಲ್ಲಿ ವಿದ್ಯಾರ್ಥಿಗಳಿಂದ ವಸೂಲು ಮಾಡುತ್ತಿರುವ ಶುಲ್ಕದ ಬಗ್ಗೆ

28(95) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿಯಲ್ಲಿರುವ ತುಂಗಾ ಮಹಾ ವಿದ್ಯಾಲಯಕ್ಕೆ ಸರ್ಕಾರ ವಾರ್ಷಿಕ ನೀಡುವ ಅನುದಾನವೆಷ್ಟು; ಪ್ರತೀ ವರ್ಷವೂ ನಿಗದಿಪಡಿಸಿದ ಅನುದಾನ ಬಿಡುಗಡೆಯಾಗುತ್ತಿದೆಯೇ; ಈ ಅನುದಾನವನ್ನು ಯಾವ ಬಾಬುಗಳಿಗಾಗಿ ಬಿಡುಗಡೆ ಮಾಡಲಾಗಿದೆ.

ಅ) ಖಾಸಗಿ ಅನುದಾನಿತ ಕಾಲೇಜುಗಳಲ್ಲಿ ಪಿ.ಯು.ಸಿ ಮತ್ತು ಪದವಿ ತರಗತಿಗೆ ವ್ಯಾಸಂಗ ಮಾಡಲು ಪ್ರತಿಯೊಬ್ಬ ವಿದ್ಯಾರ್ಥಿಯಿಂದ ಆಡಳಿತ ಮಂಡಳಿಯವರು ಎಷ್ಟು ಹಣ ಪಡೆಯಲು ಅನುಮತಿ ನೀಡಲಾಗಿದೆ.

ಇ) ತೀರ್ಥಹಳ್ಳಿ ತುಂಗಾ ಮಹಾ ವಿದ್ಯಾಲಯದಲ್ಲಿ ಡೊನೇಷನ್ ಸೇರಿ ಎಷ್ಟು ಹಣ ಪ್ರತಿ ತರಗತಿಗೆ ಪ್ರತಿಯೊಬ್ಬ ವಿದ್ಯಾರ್ಥಿಯಿಂದ ಪಡೆಯಲಾಗುತ್ತಿದೆ; ಇದರಲ್ಲಿ ಬಡತನ ರೇಖೆಯ ಕೆಳಗಿರುವ ಹಾಗೂ ಪರಿಶಿಷ್ಟ ಜಾತಿ : ವರ್ಗದ ವಿದ್ಯಾರ್ಥಿಗಳಿಗೆ ರಿಯಾಯಿತಿ ಇದೆಯೆ; ಹಾಗಿದ್ದಲ್ಲಿ ಎಷ್ಟು?

ಡಾ॥ ಚಿ. ಪರಮೇಶ್ವರ್ (ಉನ್ನತ ಶಿಕ್ಷಣ ಸಚಿವರು) :

ಅ) ರೂ. 96.84.000-00

ಹೌದು

ಶೇ.100ರಷ್ಟು ಅನುದಾನವನ್ನು ವೇತನ ಬಾಬ್ತಿಗಾಗಿ ಬಿಡುಗಡೆ ಮಾಡಲಾಗುತ್ತಿದೆ.

ಆ) ಪಿ.ಯು.ಸಿ ರೂ. 710-00

ಪದವಿ ರೂ. 859-00

ಇ) ಪ್ರಶ್ನೆ ರಲ್ಲಿ ನಮೂದಿಸಿರುವ ಶುಲ್ಕ ಮಾತ್ರ ಪಡೆಯಲು ಸರ್ಕಾರದ ಆದೇಶಗಳಿವೆ. ಆದರೆ ಡೊನೇಷನ್ ವಸೂಲಿ ಮಾಡುವಂತೆ ಯಾವುದೇ ಆದೇಶ ಹೊರಡಿಸಿರುವುದಿಲ್ಲ. ಬಡತನ ರೇಖೆಯ ಕೆಳಗಿರುವ ಹಾಗೂ ಎಸ್.ಸಿ. ಎಸ್.ಟಿ ವರ್ಗದ ವಿದ್ಯಾರ್ಥಿಗಳಿಗೆ ವಿನಾಯಿತಿ ಇರುತ್ತದೆ. ರೂ.11,100-00 ಮತ್ತು ಅದಕ್ಕಿಂತ ಕಡಿಮೆ ವಾರ್ಷಿಕ ಆದಾಯ ಇರುವ ಕುಟುಂಬದ ವಿದ್ಯಾರ್ಥಿಗಳಿಗೆ ಪಾಠ ಶುಲ್ಕದಿಂದ ಸಂಪೂರ್ಣ ವಿನಾಯಿತಿ ನೀಡಲಾಗಿದೆ.

ಎಸ್.ಸಿ : ಎಸ್.ಟಿ ವಿದ್ಯಾರ್ಥಿಗಳಿಗೆ ಇರುವ ವಿನಾಯಿತಿ ಕೆಳಕಂಡಂತಿದೆ

ಪಾಠ ಶುಲ್ಕ	- ರೂ. 484-00
ಪ್ರಯೋಗಾಲಯ ಶುಲ್ಕ	- ರೂ. 133-00
ಪ್ರವೇಶ ಶುಲ್ಕ	- ರೂ. 30-00
ವೈದ್ಯಕೀಯ ತಪಾಸಣಾ ಶುಲ್ಕ	- ರೂ. 12-00
ಗ್ರಂಥಾಲಯ ಶುಲ್ಕ	- ರೂ. 36-00

ಶ್ರೀ ಆರಗ ಜ್ಞಾನೇಂದ್ರ :- ಮಾನ್ಯ ಅಧ್ಯಕ್ಷರೆ, ಪ್ರಶ್ನೆಯನ್ನು ನಾನು ಬಹಳ ನೋವಿನಿಂದ ಕೇಳುತ್ತಿದ್ದೇನೆ. ನನ್ನ ಕ್ಷೇತ್ರದ ಒಂದು ಕಾಲೇಜಿಗೆ ಸುಮಾರು ಒಂದು ಕೋಟಿ ರೂಪಾಯಿಗಳ ವಾರ್ಷಿಕ ಅನುದಾನ ಸರ್ಕಾರದಿಂದ ಮಂಜೂರಾಗಿ ಬರುತ್ತಿದೆ. ಆದರೂ ಕೂಡ ಈ ಶಿಕ್ಷಣ ಸಂಸ್ಥೆ ಬಡವರಿಗೆ, ದಲಿತರಿಗೆ ಶಿಕ್ಷಣವನ್ನು ನಿರಾಕರಿಸುತ್ತಿದೆ. ಅವರು ಅದರ ಕಾಂಪೌಂಡ್‌ನಲ್ಲಿ ಕಾಲಿಡಲೂ ಬಿಡುತ್ತಿಲ್ಲ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಪಿಯಸಿ ಗೆ 710 ರೂಪಾಯಿಗಳು

ಮತ್ತು ಪದವಿ ತರಗತಿಗಳಿಗೆ 859 ರೂಪಾಯಿಗಳ ಫೀಸ್‌ನ್ನು ಮಾತ್ರ ವಸೂಲಿ ಮಾಡಲು ಆದೇಶ ಇದೆ ಎಂದು ಹೇಳಿದ್ದಾರೆ. ನನ್ನ ಹತ್ತಿರ ರಸೀದಿಗಳು ಇವೆ. ಒಬ್ಬೊಬ್ಬ ವಿದ್ಯಾರ್ಥಿಯಿಂದ 3 ಸಾವಿರ, 5 ಸಾವಿರ, 7 ಸಾವಿರ ಹೀಗೆ ವಸೂಲಿ ಮಾಡಿದ್ದಾರೆ. ಇದು ಒಂದು ವರ್ಷವಲ್ಲ, ಪ್ರತಿವರ್ಷ ಪ್ರತಿಯೊಬ್ಬ ವಿದ್ಯಾರ್ಥಿಯ ಪೋಷಕರೂ ಕೊಡಬೇಕಾಗಿದೆ. ತಮಗೇ ಗೊತ್ತಿದೆ, ಬಹಳ ಗಣ್ಯಾತಿಗಣ್ಯರನ್ನು ನಮ್ಮನಾಡು-ನುಡಿಗೆ ಕೊಟ್ಟಿರತಕ್ಕಂಥ ತಾಲ್ಲೂಕು ನಮ್ಮದು. ರಾಷ್ಟ್ರಕವಿ ಕುವೆಂಪುರವರನ್ನು ಆನಂತ ಮೂರ್ತಿಯವರನ್ನು, ಹಾ.ಮಾ. ನಾಯಕ್‌ರವರನ್ನು, ಹೆಚ್.ವಿ. ಪರಮೇಶ್ವರ ಭಟ್ಟರ್‌ವರನ್ನು, ಇತ್ತೀಚೆಗೆ ಜಾರ್ಖಂಡ್ ರಾಜ್ಯದ ರಾಜ್ಯಪಾಲರಾಗಿ ನೇಮಕಗೊಂಡ ನ್ಯಾಯಮೂರ್ತಿ ರಾಮಾಜೋಯಿಸ್‌ರವರನ್ನು ಶ್ರೀ ಎನ್.ಡಿ. ವೆಂಕಟೇಶ್‌ರವರನ್ನು ಶ್ರೀ ಬಿ.ಎಸ್. ವಿಶ್ವನಾಥ್‌ರವರನ್ನು, ಕಡಿದಾಳ್ ಮಂಜಪ್ಪನವರನ್ನು, ಮಾನ್ಯ ಗೋಪಾಲ ಗೌಡರನ್ನು ಕೊಟ್ಟಂಥ ತಾಲ್ಲೂಕು ನಮ್ಮದು. ಅವರೆಲ್ಲರ ಆಶೋತ್ತರ ಇಲ್ಲಿ ಒಂದು ಕಾಲೇಜು ಆಗಬೇಕು ಎಂಬುದಾಗಿತ್ತು. ಅದರಂತೆ ಅಲ್ಲಿ ಖಾಸಗಿ ಕಾಲೇಜನ್ನು ಸ್ಥಾಪನೆಯಾಯಿತು. ಮೊದಲು ನಮ್ಮ ಮಲೆನಾಡಿನ ವಿದ್ಯಾರ್ಥಿಗಳು ವ್ಯಾಸಂಗಕ್ಕೆ ಮೈಸೂರಿಗೆ ಬರುತ್ತಿದ್ದರು. ಇರುವವರ ಮಕ್ಕಳು ಮೈಸೂರಿಗೆ ಬಂದು ವ್ಯಾಸಂಗ ಮಾಡುತ್ತಿದ್ದರು. ಬಡವರ ಮಕ್ಕಳು ಮೈಸೂರಿಗೆ ಬಂದು ವ್ಯಾಸಂಗ ಮಾಡಲು ಆಗುವುದಿಲ್ಲ. ಆದ್ದರಿಂದ ಅಲ್ಲೇ ಬಡವರ ಮಕ್ಕಳಿಗೆ, ದಲಿತರಿಗೆ ಕಾಲೇಜಿನ ಶಿಕ್ಷಣ ಸಿಗಬೇಕು ಎಂದು ಈ ಖಾಸಗಿ ಸಂಸ್ಥೆಯನ್ನು ಆರಂಭ ಮಾಡಿದರು. ಅದಕ್ಕೆ ಸರ್ಕಾರ ವಾರ್ಷಿಕ ಸುಮಾರು ಒಂದು ಕೋಟಿ ರೂಪಾಯಿಗಳ ಅನುದಾನವನ್ನು ಕೊಡುತ್ತಿದೆ. ಹೀಗಿದ್ದರೂ ಸಹ, ಇವತ್ತು ಬಡವರನ್ನು, ದಲಿತರನ್ನು ಆ ಕಾಲೇಜಿನ ಕಾಂಪೌಂಡ್ ಒಳಗೂ ಸೇರಿಸುವುದಿಲ್ಲ. ಹೀಗಾಗಿ ಅವರು ಶಿಕ್ಷಣವನ್ನು ಪಡೆಯಲಾಗದೇ ತಮ್ಮ ಶಿಕ್ಷಣವನ್ನು ಮೊಟಕುಗೊಳಿಸಿದ್ದಾರೆ. ಅವರ ಭವಿಷ್ಯದ ಉದ್ಧಾರದ ದೃಷ್ಟಿಯಿಂದ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬುದನ್ನು ಹೇಳಬೇಕು. ಸರ್ಕಾರ ಆ ಸಂಸ್ಥೆಗೆ ಇಷ್ಟೊಂದು ಹಣವನ್ನು ಕೊಡುತ್ತಿರುವಾಗ, ಅಲ್ಲಿ ಡೊನೇಷನ್ನಿನ ಇಷ್ಟೊಂದು ಹಾವಳಿ ಈಗ ಹಾಲಿ ಇರುವ ಆಕ್ಟ್‌ನ ಪ್ರಕಾರ, ನಿಮ್ಮ ಅಧಿಕಾರಿಗಳು ಅಲ್ಲಿಗೆ ಹೋಗಿ ಏಕೆ ವಿಚಾರಿಸಲಿಲ್ಲ? ನಿಮ್ಮ ಅಧಿಕಾರಿಗಳು ಏನು ಮಾಡುತ್ತಿದ್ದಾರೆ ಎನ್ನುವುದನ್ನು ದಯವಿಟ್ಟು ಹೇಳಬೇಕು.

ಡಾ|| ಜಿ. ಪರಮೇಶ್ವರ : ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ರಾಜ್ಯದಾದ್ಯಂತ ಇರುವ ಖಾಸಗಿ ಕಾಲೇಜುಗಳಲ್ಲಿ ಇದೊಂದು ದೊಡ್ಡ ಪಿಡುಗು ಎಂದು ಹೇಳಬಹುದು. ಆದರೆ ಇದುವರೆಗೂ ಯಾರೂ ಸಹ ಡೊನೇಷನ್ ತೆಗೆದುಕೊಳ್ಳುತ್ತಾರೆ ಎಂದಾಗಲೀ, ಡೊನೇಷನ್ ಕೊಟ್ಟಿದ್ದೇವೆ ಎಂದಾಗಲೀ, ಅಥವಾ ರಸೀದಿಗಳನ್ನು ತೋರಿಸಲಾಗಲೀ ಮುಂದೆ ಬರುತ್ತಿರಲಿಲ್ಲ. ಈಗ ತಾವು ರಸೀದಿ ಕೊಟ್ಟಿದ್ದಾರೆ, ತಮ್ಮ ಬಳಿ ರಸೀದಿ ಇವೆ ಎಂದು ಹೇಳಿದಿರಿ. ನಿರ್ದಿಷ್ಟವಾಗಿ ಎಷ್ಟು ಫೀಸನ್ನು ತೆಗೆದುಕೊಳ್ಳಬೇಕು ಎಂದು ನಾವು ಫೀಸ್‌ನ್ನು ಪರಿಷ್ಕರಣೆ ಮಾಡಿ ಆದೇಶವನ್ನು ಹೊರಡಿಸಿದ್ದೇವೆ. ಅದರ ಪ್ರಕಾರ ನಾವು ಮಾನ್ಯ ಸದಸ್ಯರಿಗೆ ಕೊಟ್ಟಿರುವ ಉತ್ತರದಲ್ಲಿ, ಪದವಿ ತರಗತಿಗಳಿಗೆ 859 ರೂಪಾಯಿಗಳನ್ನು ಮಾತ್ರ ತೆಗೆದುಕೊಳ್ಳಬೇಕು, ಟ್ಯೂಷನ್ ಫೀಸ್ 400 ರೂಪಾಯಿಗಳನ್ನು ತೆಗೆದುಕೊಳ್ಳಬೇಕು ಎಂದು ಹೇಳಿದ್ದೇವೆ. ಅದಕ್ಕಿಂತ ಹೆಚ್ಚಿಗೆ ತೆಗೆದುಕೊಳ್ಳುವ ಹಾಗಿಲ್ಲ. ಆದರೆ ಅದಕ್ಕೂ ಹೆಚ್ಚಿನ ಹಣವನ್ನು ಅವರು ತೆಗೆದುಕೊಂಡಿದ್ದಾರೆ, ರಸೀದಿ ಕೊಟ್ಟಿದ್ದಾರೆ ಎಂದು ತಾವು ಹೇಳುತ್ತಿದ್ದೀರಿ. ದಯಮಾಡಿ ಅದನ್ನು ಕಳುಹಿಸಿಕೊಡಿ. ನಾನು ತಕ್ಷಣ ಅಧಿಕಾರಿಗಳನ್ನು

ಆ ಕಾಲೇಜಿಗೆ ಕಳುಹಿಸಿ ಅದನ್ನು ಎನ್‌ಕ್ವೈರಿ ಮಾಡಿಸುತ್ತೇನೆ ಮತ್ತು ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇನೆ ಎಂದು ಭರವಸೆಯನ್ನು ಕೊಡುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ :- ಆ ಕಾಲೇಜಿನವರು ಪ್ರಾಸ್ಪೆಕ್ಟಸ್ ಅನ್ನು ಪ್ರಿಂಟ್ ಮಾಡಿದ್ದಾರೆ. ಅದರಲ್ಲಿ, ಫೀಸ್ ಎನ್ನುವ ಕಾಲಂನಲ್ಲಿ, ನೋಟೀಸ್ ಬೋರ್ಡಿನಲ್ಲಿ ನೋಡಿಕೊಳ್ಳಬಹುದು ಎಂದು ಹಾಕಿದ್ದಾರೆ. ಏಕೆ ಹಾಕಿಲ್ಲ ಎಂದರೆ, ಇದರಲ್ಲಿ ಪ್ರಿಂಟ್ ಮಾಡಿದರೆ ನೀವು ಇಲ್ಲಿ ಹಿಡಿದುಕೊಳ್ಳುತ್ತೀರಿ. ಈ ಪ್ರಾಸ್ಪೆಕ್ಟಸ್‌ಗೆ 75 ರೂಪಾಯಿ. ಪ್ರತಿಯೊಬ್ಬ ವಿದ್ಯಾರ್ಥಿಯೂ 75 ರೂಪಾಯಿಗಳನ್ನು ಕೊಟ್ಟು ಇದನ್ನು ಕೊಂಡುಕೊಳ್ಳಬೇಕು. ಎಷ್ಟು ಫೀಸನ್ನು ಮಸೂಲು ಮಾಡುತ್ತೇವೆ ಎಂದು ಇದರಲ್ಲಿ ಮುದ್ರಣ ಮಾಡುವುದಿಲ್ಲ. ವಾರ್ಷಿಕ ಶಿಕ್ಷಣ ಶುಲ್ಕವನ್ನು ಎರಡು ಕಂತುಗಳಲ್ಲಿ ಪಾವತಿಸಬಹುದು. ಶುಲ್ಕದ ವಿವರಗಳನ್ನು ಕಾಲೇಜಿನ ಸೂಚನಾ ಫಲಕದಲ್ಲಿ ಪ್ರಕಟಿಸಲಾಗುತ್ತದೆ ಎಂದು ಹಾಕಿದ್ದಾರೆ. ಹಾಗಾದರೆ ಈ ಪ್ರಾಸ್ಪೆಕ್ಟಸ್ ಅನ್ನು 75 ರೂಪಾಯಿ ಕೊಟ್ಟು ಏಕೆ ಕೊಂಡು ಕೊಳ್ಳಬೇಕು? ಇಂಥ ಒಂದು ಕೃತ್ಯವನ್ನು ನಮ್ಮ ಸರ್ಕಾರ ಬಹಳ ಗಹನವಾಗಿ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲದಿದ್ದರೆ ನೀವು ಒಂದು ಕೋಟಿ ರೂಪಾಯಿಗಳಲ್ಲ, ಹತ್ತು ಕೋಟಿ ರೂಪಾಯಿಗಳನ್ನು ಕೊಟ್ಟರೂ ಬಡವರಿಗೆ, ದಲಿತರಿಗೆ ಉನ್ನತ ಶಿಕ್ಷಣ ಸಿಗಲು ಸಾಧ್ಯವಿಲ್ಲ. ಶಿಕ್ಷಣ ಸಂಸ್ಥೆಗಳು ಮಾರ್ವಾಡಿ ಅಂಗಡಿಗಳಲ್ಲ.

ಅಧ್ಯಕ್ಷರು :- ಅವರು ರಸೀದಿ ಕಳುಹಿಸುತ್ತಾರೆ. ಅದನ್ನು ಎನ್‌ಕ್ವೈರಿ ಮಾಡಿಸಿ.

ಶ್ರೀ ಕರಿಯಣ್ಣ :- ಮಾನ್ಯ ಅಧ್ಯಕ್ಷರೇ, ಕೇವಲ ಒಂದು ಸಣ್ಣ ರಸೀದಿ ಮೇಲೆ ಎನ್‌ಕ್ವೈರಿ ಮಾಡಲು ಆಗುವುದಿಲ್ಲ. ಮಂತ್ರಿಗಳು ಏನು ಹೇಳಿದರು ಎಂದರೆ, ಏನಾದರೂ ದೂರು ಬಂದರೆ ಅದನ್ನು ನಾನು ನೋಡುತ್ತೇನೆ, ಯಾರೂ ರಸೀದಿಗಳನ್ನು ಕೊಡುವುದಿಲ್ಲ, ದೂರುಗಳನ್ನು ಕೊಡುವುದಿಲ್ಲ ಎಂದು ಹೇಳಿದ್ದಾರೆ. ಯಾವ ಯಾವ ಕಾಲೇಜಿನವರು ಎಷ್ಟೆಷ್ಟು ಡೊನೇಷನ್ ತೆಗೆದುಕೊಳ್ಳುತ್ತಾರೆ, ಏನೇನು ಮಾಡುತ್ತಾರೆ ಎನ್ನುವುದು ಮಾನ್ಯ ಮಂತ್ರಿಗಳಿಗೂ ಗೊತ್ತಿದೆ. ಆಡ್ಮಿಷನ್ ಮಾಡುವ ಸಮಯದಲ್ಲಿ ಇಲಾಖೆಯ ಅಧಿಕಾರಿಗಳನ್ನು ಅಲ್ಲಿ ಹಾಕಿ ದಯವಿಟ್ಟು ಅದನ್ನು ತಹಬಂದಿಗೆ ತರಬೇಕು. ಡೊನೇಷನ್ನಿನ ಹಾವಳಿಯ ಬಗ್ಗೆ ಅವರಿಗೂ ಗೊತ್ತಿದೆ, ಅದನ್ನು ಅವರೂ ಒಪ್ಪಿಕೊಂಡಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) :- ಸನ್ಮಾನ್ಯ ಅಧ್ಯಕ್ಷರೇ, ಆ ರಸೀದಿಗಳನ್ನು ಪ್ರೊಡ್ಯೂಸ್ ಮಾಡಿ ನಾನು ಕ್ರಮ ತೆಗೆದುಕೊಳ್ಳುತ್ತೇನೆ ಎಂದು ಮಾನ್ಯ ಸಚಿವರು ಹೇಳಿದರು. ಇದು ಒಂದು ಮಾತು. ಆದರೆ ಇವತ್ತು ಡೊನೇಷನ್ ತೆಗೆದುಕೊಳ್ಳುವಂಥಾದ್ದು ಓಪನ್ ಆಗಿ ನಡೆಯುತ್ತಿದೆ. ಶಿಕ್ಷಣ ಎನ್ನುವುದು ಮಾರಾಟ ಮಾಡುವಂಥ ದೊಡ್ಡ ವ್ಯಾಪಾರವಾಗಿದೆ. ನೀವು ಅಧಿಕಾರಿಗಳ ಮುಖಾಂತರ ಬೇರೆಬೇರೆ ರೂಪದಲ್ಲಿ ಒತ್ತಡ ತಂದು ಅದನ್ನು ನಿಲ್ಲಿಸುವಂಥ ಕೆಲಸ ಆಗಬೇಕಾಗಿದೆ. ಪೇರೆಂಟ್ಸ್ ರಸೀದಿ ತೆಗೆದುಕೊಂಡು ಬರಬೇಕು ಎಂದರೆ ಆಗುವುದಿಲ್ಲ. ಏಕೆಂದರೆ ರಸೀದಿಯನ್ನು ಬೇರೆ ರೀತಿಯಲ್ಲಿ ಕೊಡುತ್ತಾರೆ. ಯಾವುದೇ ಒಂದು ಬಿಲ್ಡಿಂಗ್ ಕನ್‌ಸ್ಟ್ರಕ್ಶನ್‌ನೆಂದೋ ಅಥವಾ ಬೇರೆ ರೂಪದಲ್ಲಿ ತೆಗೆದುಕೊಳ್ಳುತ್ತಾರೆ. ಅದನ್ನು ಪ್ರೂವ್ ಮಾಡಲು ಆಗುವುದಿಲ್ಲ. ಹೀಗಾಗಿ ಸಂಬಂಧಪಟ್ಟ ಕ್ಷೇತ್ರದ ಶಿಕ್ಷಣ ಅಧಿಕಾರಿಗಳು ಬೇರೆ ಬೇರೆ

ರೀತಿಯ ಒತ್ತಡ ತೆಗೆದುಕೊಂಡು ಬಂದರೆ ಡೊನೇಷನ್ ಹಾವಳಿಯನ್ನು ನಿಲ್ಲಿಸಲು ಸಾಧ್ಯವಿದೆ. ಇಲ್ಲದಿದ್ದರೆ ಇವತ್ತಿನ ವ್ಯವಸ್ಥೆಯಲ್ಲಿ ಬಡವರ ಮಕ್ಕಳು ಶಾಲೆಗೆ ಹೋಗುವಂಥ ಪರಿಸ್ಥಿತಿ ಇಲ್ಲ. ಉತ್ತಮ ಶಿಕ್ಷಣ ಸಂಸ್ಥೆಗಳಿಗೆ ನಮ್ಮ ಮಕ್ಕಳನ್ನು ಕಳುಹಿಸಬೇಕು ಎನ್ನುವ ಕಳಕಳಿಯನ್ನು ವ್ಯಕ್ತಪಡಿಸುವ ಬಡ ಪಾಲಕರಿಗೆ ಇಂಥ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶವಿಲ್ಲ. ಅದರಲ್ಲೂ ಬಡವರು, ಆರ್ಥಿಕವಾಗಿ ಹಿಂದುಳಿದವರು, ದಲಿತರು ಇಂಥ ಶಾಲೆಗಳಿಗೆ ಹೋಗಲಾರದಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಸರ್ಕಾರದಿಂದಲೇ ಬೇರೆಬೇರೆ ರೂಪದಲ್ಲಿ ಒತ್ತಡ ತರುವಂಥ ಕೆಲಸವಾಗಬೇಕು. ಪೇರೆಂಟ್ಸ್‌ಗಳ್ಯಾರೂ ದೂರು ಕೊಡುವಂಥ ಧೈರ್ಯ ಮಾಡುವುದಿಲ್ಲ. ಏಕೆಂದರೆ, ಹಾಗೆ ಮಾಡಿದರೆ ನಾಳೆ ಅವರಿಗೆ ತೊಂದರೆಗಳು ಬರುವ ಸಾಧ್ಯತೆಗಳಿವೆ. ಆದ್ದರಿಂದ, ತಾವು ಅದರ ಬಗ್ಗೆ ಅಧಿಕಾರಿಗಳ ಮೂಲಕ ಹೆಚ್ಚಿನ ಒತ್ತಡ ತಂದು ಕೆಲಸ ಮಾಡುವಂಥಾದ್ದಾಗಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಕಳೆದ ವರ್ಷದ ಅಧಿವೇಶನದಲ್ಲಿ ನಾವು ಮತ್ತು ಮಾನ್ಯ ಸುರೇಶ್ ಕುಮಾರ್‌ರವರು, ಬೆಂಗಳೂರಿನ ಸಿಟಿಯಲ್ಲಿರುವ ಕಾಲೇಜುಗಳಲ್ಲಿ ಪ್ರೀ-ಯೂನಿವರ್ಸಿಟಿ ಅಡ್ಮಿಷನ್‌ಗೆ ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಮತ್ತು ಹಿಂದುಳಿದ ವರ್ಗದವರಿಗೆ ತೊಂದರೆಯಾಗುತ್ತದೆ ಎನ್ನತಕ್ಕಂಥಾದ್ದರ ಬಗ್ಗೆ ಸರ್ಕಾರಕ್ಕೆ ಸಲಹೆ ಕೊಟ್ಟಿದ್ದೆವು. ಅದರಂತೆ, ಸರ್ಕಾರ ಒಂದು ಒಳ್ಳೆಯ ಕೆಲಸ ಮಾಡಿದೆ. ಪಿ ಯು ಸಿಗೆ ಹೋಗತಕ್ಕಂಥ ಶೇಕಡ ಶೇ. 80ರಷ್ಟು ಸೀಟುಗಳನ್ನು ಮೇನೇಜ್‌ಮೆಂಟ್‌ಗೆ ಕೊಡದೇ, ಮೆರಿಟ್-ಕಂ-ರೋಸ್ಟರ್ ಆಧಾರದಲ್ಲಿ ಮಾಡಬೇಕು ಎಂದು ಸಂಬಂಧಪಟ್ಟ ಮಂತ್ರಿಗಳು ಮಾಡಿರತಕ್ಕಂಥಾದ್ದು ಸ್ವಾಗತಾರ್ಹವಾಗಿರತಕ್ಕಂಥ ಕೆಲಸ. ಅಷ್ಟರಮಟ್ಟಿಗೆ ಬೆಂಗಳೂರಿನ ಮಧ್ಯಮ ವರ್ಗದವರಿಗೆ ಉಪಯೋಗವಾಗಿರುವ ಒಳ್ಳೆಯ ಕೆಲಸ. ಶ್ರೀ ಅರಗ ಜ್ಞಾನೇಂದ್ರರವರೇನು ಹೇಳುತ್ತಿದ್ದಾರೆಂದರೆ, ಬೆಂಗಳೂರಿನಲ್ಲಿ ಅದು ಬಹಳ ದೊಡ್ಡ ಪಿಡುಗಾಗಿ ಬೆಳೆಯುತ್ತಿರುವುದು ತಮಗೆ ಗೊತ್ತಿದೆ, ಬೇರೆ ಬೇರೆ ಹೆಸರಿನಲ್ಲಿ 25 ರಿಂದ 70 ಸಾವಿರ ರೂಪಾಯಿಗಳವರೆಗೆ ಪಡೆಯುತ್ತಾರೆ. ಈ ಸರ್ಕಾರ ಬಂದ ಮೇಲೆ ಖಾಸಗಿ ಶಿಕ್ಷಣ ಸಂಸ್ಥೆಗಳ ಬಗ್ಗೆ ತಾವೊಂದು ಬೇರೆ ನೀತಿಯನ್ನು ಇಟ್ಟುಕೊಂಡಿದ್ದೀರಿ. ಅದರ ಬಗ್ಗೆ ನಾವು ಈ ಅಧಿವೇಶನದಲ್ಲಿ ಚರ್ಚಿಸೋಣ. ಆದರೆ, ತುರ್ತಾಗಿ ಆಗಬೇಕಾಗಿರುವುದು, ಪಿಯುಸಿ, ಬಯೋಟೆಕ್, ಟಿಷ್ಯೂ ಕಲ್ಚರ್‌ನಲ್ಲಿ ಸೀಟು ಬೇಕಾಗದರೆ 75 ಸಾವಿರ ರೂಪಾಯಿ ಹೇಳುತ್ತಾರೆ. ಅಷ್ಟು ಹಣ ಏಕೆ ಬೇಕು? ಇದರ ಬಗ್ಗೆ ಸರ್ಕಾರ ಕಟ್ಟು ನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಬೇಕು ಮಾನ್ಯ ಸದಸ್ಯರಾದ ಜ್ಞಾನೇಂದ್ರರವರು ದಾಖಲಾತಿಗಳನ್ನು ಕೊಡುತ್ತಿದ್ದಾರೆ. ತಾವು ಹೇಳುವ ಭರವಸೆ ಏನಿದೆ ಅದನ್ನು ಎಚ್ಚರಿಕೆ ರೂಪದಲ್ಲಿ ಕೊಟ್ಟರೆ ಉಪಯೋಗವಾಗುತ್ತದೆಂಬುದು ನನ್ನ ಅಭಿಪ್ರಾಯ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸರ್ಕಾರದಿಂದ ಯಾವುದೇ ಸುತ್ತೋಲೆ, ಆದೇಶಗಳನ್ನು ಹೊರಡಿಸಿದರೂ ಅವುಗಳ ಆದೇಶ ಆದೇಶವಾಗಿಯೇ ಉಳಿಯುತ್ತದೆ. ಆದರೆ, ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಅವರದೇ ಆದ ರೀತಿಯಲ್ಲಿ ಆಡಳಿತ ನಡೆಸಿಕೊಂಡು ಬರುವುದು ಬೆಳೆದು ಬಂದಿರುವ ಪದ್ಧತಿ. ಡೊನೇಷನ್ ಅಬಾಲಿಷನ್ ಮಾಡುವ ಮತ್ತು ಪ್ರವೇಶವನ್ನು ಯಾವ ರೀತಿಯಾಗಿ ಮಾಡಬೇಕೆಂದು ಹೇಳುವ ಕಾನೂನನ್ನು ನಾವು ಮಾಡಿದ್ದೇವೆ. ಆದರೂ, ಸರ್ಕಾರ ಚಾಪೆ ಕೆಳಗೆ ತೂರಿದರೆ ಅವರು ರಂಗೋಲಿ ಕೆಳಗೆ ತೂರುವ

ಪ್ರಯತ್ನ ಮಾಡುತ್ತಿದ್ದಾರೆ. ನನ್ನ ಸಲಹೆ ಏನೆಂದರೆ, ಖಾಸಗಿ ಕಾಲೇಜುಗಳಿಗೆ ಈ ಕೋರ್ಸ್‌ಗಳಿಗೆ ಇಷ್ಟು ಫೀಸ್ ಕಟ್ಟಬೇಕೆಂದು ಸರ್ಕಾರವೇ ಫಿಕ್ಸ್ ಮಾಡಿದೆ ಸರ್ಕಾರ ಅದಕ್ಕೇನು ನಿರ್ದೇಶನ ಕೊಡಬೇಕೆಂದರೆ, ಅಪ್ಲಿಕೇಷನ್ ಕೊಡುವಾಗ ಅದರ ಜೊತೆ ಸರ್ಕಾರವೇನು ನಿಗದಿಪಡಿಸಿದೆ ಅಷ್ಟನ್ನೂ ಬ್ಯಾಂಕ್ ಚಲನ್ ಮೂಲಕ ಅಥವಾ ಡಿಡಿ ಮೂಲಕ ಎನ್‌ಕ್ಲೋಸ್ ಮಾಡಿದರೆ ಆಡ್ಮಿಷನ್ ಆಗಬೇಕು. ಅವರೇ ಹಣವನ್ನು ಕಲೆಕ್ಟ್ ಮಾಡುವುದನ್ನು ನಿಷೇಧ ಮಾಡಬೇಕು. ನಮ್ಮ ಕಾಲದಲ್ಲೊಂದು ಪದ್ಧತಿ ತಂದಿದ್ದೆವು, ಸಿಇಟಿ ಪರೀಕ್ಷೆಯಲ್ಲಿ ಪಾಸಾದ ಪರಿಶಿಷ್ಟ ಜಾತಿ : ವರ್ಗದವರಿಂದ ಫೀಸ್ ಕಟ್ಟಿಸಿಕೊಳ್ಳುವ ಜೊತೆಗೆ ಕಾಲೇಜ್‌ನವರು ಡೊನೇಷನ್ ಅನ್ನೂ ಸಹ ಕಲೆಕ್ಟ್ ಮಾಡುತ್ತಿದ್ದರು. ಎಷ್ಟೋ ಪರಿಶಿಷ್ಟ ಜಾತಿ : ವರ್ಗದ ವಿದ್ಯಾರ್ಥಿಗಳು ಡೊನೇಷನ್ ಕಟ್ಟುವುದಕ್ಕಾಗದೆ, ಸಿಕ್ಕ ಸೀಟ್ ಅನ್ನು ಬಿಟ್ಟು ಬರುತ್ತಿದ್ದರು. ಅದಕ್ಕೆ ಸಿಇಟಿ ಸೆಲ್‌ನಲ್ಲಿಯೇ ಆಡ್ಮಿಷನ್ ಆಗಬೇಕು, ಎಸ್.ಸಿ.ಯವರಿಗೆ ಜೀರೋ ರೆಸಿಟ್ ಆ ಹಣವನ್ನು ಫೈನಾನ್ಸ್ ಡಿಪಾರ್ಟ್‌ಮೆಂಟಿನವರು ಭರಿಸಬೇಕು, ಕೇಂದ್ರ ಸರ್ಕಾರದಿಂದ ಬರುವ ಹಣವನ್ನು ನಾವು ಆಡ್ಜಸ್ಟ್ ಮಾಡಿಕೊಳ್ಳಬೇಕೆಂಬ ಕಾನೂನನ್ನು ಮಾಡಿದ್ದೆವು. ಅದು ಯಶಸ್ವಿಯಾಗಿ ನಡೆಯುತ್ತಿದೆ. ಒಂದು ಸಾರಿ ಮಾತ್ರ ಅದಕ್ಕೆ ತಡೆ ಇತ್ತು. ಅದೇ ರೀತಿ ಬೇರೆ ವರ್ಗದವರೂ ಸರ್ಕಾರ ನಿಗದಿಪಡಿಸಿರುವ ಫೀಸ್ ಅನ್ನು ಚಲನ್ ಮೂಲಕ ಅಪ್ಲಿಕೇಷನ್ ಜೊತೆಗೆ ಕಟ್ಟಬೇಕೆಂದು ಮಾಡಿದರೆ, ಅವರು ಆಡ್ಮಿಷನ್ ಮಾಡಿಕೊಳ್ಳಬೇಕಾಗುತ್ತದೆ, ಅದನ್ನು ಏಕೆ ಮಾಡಬಾರದು?

ಡಾ॥ ಜಿ. ಪರಮೇಶ್ವರ್ : ಮಾನ್ಯ ಸದಸ್ಯರಾದ ಜ್ಞಾನೇಂದ್ರರವರು ಹೇಳಿರುವ ಕಾಲೇಜಿನ ಬಗ್ಗೆ ಈಗಾಗಲೇ ನಾನು ಹೇಳಿದ ಹಾಗೆ ಎನ್‌ಕ್ವೈರಿ ಮಾಡಿಸುತ್ತೇನೆ, ನಮ್ಮ ಅಧಿಕಾರಿಗಳನ್ನು ಕಳುಹಿಸುತ್ತೇನೆ, ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇನೆ. ಮಾನ್ಯ ಸದಸ್ಯರಾದ ಕರಿಯಣ್ಣನವರು, ಎಲ್ಲಾ ಕಾಲೇಜುಗಳಲ್ಲಿ ಡೊನೇಷನ್ ತೆಗೆದುಕೊಳ್ಳುವುದು ನನಗೆ ಗೊತ್ತಿದೆ ಎಂದು ಹೇಳಿದರು, ಅದಕ್ಕೊಂದು ಸಣ್ಣ ಕರೆಕ್ಷನ್, ಅದು ನನಗೆ ಗೊತ್ತಿಲ್ಲ. ಆದರೆ, ವಿರೋಧ ಪಕ್ಷದ ನಾಯಕರು, ಶ್ರೀ ಸಿಂಧ್ಯರವರು, ಶ್ರೀ ಸೋಮಶೇಖರ್‌ರವರು ಆಡಿದ ಮಾತಿನ ಬಗ್ಗೆ ಹೇಳುವುದಾದರೆ, ಇಡೀ ರಾಜ್ಯದಲ್ಲಿ ಖಾಸಗಿ ಸಂಸ್ಥೆಯವರ ಬಗ್ಗೆ ಕಡಿವಾಣ ಹಾಕಬೇಕು, ಆಡ್ಮಿಷನ್‌ನಲ್ಲಿ ಯಾವ ರೀತಿ ಅವ್ಯವಹಾರವಆಗುತ್ತದೆಂಬ ಬಗ್ಗೆ ಚರ್ಚೆಯಾಗಬೇಕಾಗುತ್ತದೆ. ಅದರ ಜೊತೆಯಲ್ಲಿ ಅದಕ್ಕೊಂದು ಪಾಲಿಸಿಯನ್ನು ಇವತ್ತಿನ ದಿವಸ ಹೊಸದಾಗಿ ಮಾಡಬೇಕಾಗುತ್ತದೆ. ಮುಂದೆ ಬರುವ ದಿವಸಗಳಲ್ಲಿ ಆ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಪ್ರಯತ್ನಿಸುತ್ತೇನೆ. ಸದನದಲ್ಲಿ ಅದರ ಬಗ್ಗೆ ಚರ್ಚೆ ಮಾಡಿದರೆ ಸೂಕ್ತವೆಂದು ನಾನು ಭಾವಿಸುತ್ತೇನೆ. ಈಗಾಗಲೇ ನಾವು ಡಿಗ್ರಿ ಕಾಲೇಜಿನ ಆಡ್ಮಿಷನ್ ಅನ್ನು ಬೆಂಗಳೂರಿನ ಮಟ್ಟಿಗೆ ಸಿಇಟಿ ಮಾದರಿ ಮಾಡಿದರೆ ಅನುಕೂಲವಾಗುತ್ತದೆಂಬ ಬಗ್ಗೆ ಯೋಚಿಸುತ್ತಿದ್ದೇವೆ. ಇಲ್ಲಿ ಖಾಸಗಿ ಸಂಸ್ಥೆಯವರು ನಡೆಸುವ ಬೇರೆ ಬೇರೆ ಪ್ರತಿಷ್ಠಿತ ಕಾಲೇಜುಗಳಿವೆ. ಅಲ್ಲಿಯೂ ಕೂಡ ಇಂಥ ವ್ಯವಸ್ಥೆ ನಡೆಯುತ್ತಿದೆ ಎಂಬುದು ಸರ್ಕಾರದ ಗಮನಕ್ಕೆ ಆಗಾಗ್ಗೆ ಬರುತ್ತದೆ. ಪ್ರತಿ ವರ್ಷ ಆಡ್ಮಿಷನ್ ಮಾಡುವಾಗ ಇದೊಂದು ದೊಡ್ಡ ಸಮಸ್ಯೆಯಾಗಿ ನಮ್ಮ ಮುಂದೆ ಬರುತ್ತದೆ. ಪ್ರೊಫೆಷನಲ್ ಕೋರ್ಸ್‌ಗಳಿಗೆ ಸಿಇಟಿ ಎಂದೇನು ಮಾಡಿದ್ದೇವೆ, ಅದೇ ಪ್ರಕಾರ ಸಿಇಟಿ ಮಾದರಿ ವ್ಯವಸ್ಥೆಯನ್ನು ಡಿಗ್ರಿ, ಪಿಯುಸಿ ಆಡ್ಮಿಷನ್‌ಗೂ ಜಾರಿಗೆ ತರಬೇಕೆಂದು ಪರಿಶೀಲಿಸುತ್ತಿದ್ದೇವೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಬೆಂಗಳೂರಿನಲ್ಲಿ ಹೈಯೆಸ್ಟ್ ರಿಸಲ್ಟ್ ಬರುತ್ತಿರುವ ಕಾಲೇಜುಗಳಲ್ಲಿ ಬಹಳ ತೊಂದರೆ ಇದೆ. ಗೌರ್ಮೆಂಟ್ ಕಾಲೇಜುಗಳಲ್ಲಿ ಯಾರೂ ಕೇಳುತ್ತಿಲ್ಲ. ತೀರ್ಥಹಳ್ಳಿಯಲ್ಲಿ ಜ್ಞಾನೇಂದ್ರರವರು ಶಾಸಕರಾಗಿದ್ದಾರೆ, ಅವರಿಗೇ ಅಲ್ಲಿ ಸೀಟುಗಳನ್ನು ಕೊಟ್ಟ ಹಾಗಿಲ್ಲ. ಇನ್ನು ಬಸವನಗುಡಿಯಲ್ಲಿ ಯಾವ ಪ್ರಾಬ್ಲಂ ಇದೆ ಎಂಬುದನ್ನು ಯೋಚನೆಯಾದ ಈಗ ಆ ಪ್ರಾಬ್ಲಂ ಗೊತ್ತಾಗಿದೆ. ಅದು ನ್ಯಾಚುರಲ್.

ಅಧ್ಯಕ್ಷರು : ಅವರಿಗೆ ಕೊಟ್ಟಿಲ್ಲವೆಂದಲ್ಲ, ಅವರು ಜನರಲ್ ಆಗಿ ಹೇಳುತ್ತಿದ್ದಾರೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಬೆಂಗಳೂರಿನಲ್ಲಿ ಮಾನ್ಯ ಸಚಿವರು ಗಮನಿಸಬೇಕಾಗುತ್ತದೆ.

ಶ್ರೀ ಸಿ. ಬೈರೇಗೌಡ : ಶಾಸಕರ ಪತ್ರಗಳಿಗೆ ಅಧ್ಯಕ್ಷರ ಆದೇಶದ ಮೇರೆ ಈ ಪದಗಳನ್ನು ಕಡತದಿಂದ ಕೈಬಿಡಲಾಗಿದೆ. ಹೇಳಿರುವುದನ್ನು ಕಡತದಿಂದ ತೆಗೆಸಬೇಕು.

Mr. Speaker : We will remove it.

ಶ್ರೀ ಅರಗ ಜ್ಞಾನೇಂದ್ರ : ನಾನು ಯಾವುದೇ ಪತ್ರವನ್ನೂ ಆ ಕಾಲೇಜಿಗೆ ಕಳುಹಿಸಿರಲಿಲ್ಲ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ : ಸ್ಕೂಲ್ ಮತ್ತು ಕಾಲೇಜುಗಳಿಗೆ ಸಿಇಟಿ ಸಿಸ್ಟಂ ಅನ್ನು ಇಂಟ್ರಡ್ಯೂಸ್ ಮಾಡಬೇಕೆಂದು ಹೈಕೋರ್ಟಿನಲ್ಲಿ ರಿಟ್ ಪಿಟಿಷನ್ ಮೂಲಕ ತೀರ್ಮಾನವಾಗಿದೆ. ಅದರ ಮೇಲೆ ತಾವೇನು ಕ್ರಮ ತೆಗೆದುಕೊಂಡಿದ್ದೀರಿ? ಸಿಇಟಿ ಸಿಸ್ಟಂ ಮಾಡದಿದ್ದರೆ, ಬೆಂಗಳೂರಿನಲ್ಲಿ ಆಡ್ಮಿಷನ್ ಆಗುವುದೇ ಕಷ್ಟವಾಗುತ್ತದೆ.

ಡಾ|| ಜಿ. ಪರಮೇಶ್ವರ್ : ಡಿಗ್ರಿ ಆಡ್ಮಿಷನ್‌ಗೆ ಬೆಂಗಳೂರಿನಲ್ಲಿ ಸಿಇಟಿ ಮಾದರಿ ಮಾಡಬೇಕೆಂಬುದು ಪರಿಶೀಲನೆಯಲ್ಲಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು : ಕ್ವೊಶ್ಚನ್ ಹವರ್‌ನಲ್ಲಿ ಈಗಾಗಲೇ 15 ನಿಮಿಷ ಜಾಸ್ತಿಯಾಗಿದೆ. ಹೀಗೆ ಮುಂದುವರೆದರೆ ಕ್ವೊಶ್ಚನ್ ಹವರ್ಸ್ ಆಗುತ್ತದೆ. ಸದಸ್ಯರು ಸ್ವಲ್ಪ ಕೋ-ಅಪರೇಟ್ ಮಾಡಬೇಕು.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ,

Mr. Speaker : It won't lapse. ಈಗಾಗಲೇ 10 ನಿಮಿಷ ಜಾಸ್ತಿಯಾಗಿದೆ. ಕ್ವೊಶ್ಚನ್ ಹವರ್ಸ್ ಆಗುತ್ತದೆಂದು ಬೇರೆಯವರು ಕೇಳುತ್ತಾರೆ. ಅದಕ್ಕೆ ನಾನೇನು ಹೇಳಲಿ? ಇನ್ನೂ ಒಂದು ತಿಂಗಳು ಅಧಿವೇಶನವಿರುತ್ತದೆ. ಆಗ ತೆಗೆದುಕೊಳ್ಳುತ್ತೇವೆ. I can promise you.

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ : ನನ್ನ ಸಲಹೆ ಏನೆಂದರೆ, ಪ್ರತಿಯೊಂದು ಹಂತದಲ್ಲೂ ಸಿಇಟಿ ಪರೀಕ್ಷೆಯ ಮಾದರಿ ಮಾಡಿದರೆ ಮಕ್ಕಳಿಗೆ ರಜಾ ದಿನ ಬೇಡವೆ? It is very difficult. ಪಿಯುಸಿಯಲ್ಲಿ ಪರೀಕ್ಷೆ ಇರುತ್ತದೆ, ಪುನಃ ಸಿಇಟಿ ಪರೀಕ್ಷೆ ಇರುತ್ತದೆ. ಹೀಗೆ ಪ್ರತಿಯೊಂದು ಹಂತದಲ್ಲಿ ಮಾಡುವುದರಿಂದ ಮಕ್ಕಳಿಗೆ ಬಹಳ ತೊಂದರೆಯಾಗುತ್ತದೆ. ಅವರು ಅವರ ಬಾಲ್ಯವನ್ನೇ ಕಳೆದುಕೊಳ್ಳುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅದರ ಬಗ್ಗೆ ಯೋಚಿಸಬೇಕು.

ಅಧ್ಯಕ್ಷರು : ಉಳಿದ 3 ಪ್ರಶ್ನೆಗಳನ್ನು ಮುಂದಿನ ವಾರ ತೆಗೆದುಕೊಳ್ಳುತ್ತೇವೆ. Question hour is over.

(ಗೊಂದಲ)

ಶ್ರೀ ಎನ್. ಚಲುವರಾಯಸ್ವಾಮಿ : ಮಾನ್ಯ ಅಧ್ಯಕ್ಷರೆ,

ಶ್ರೀ ಹೆಚ್.ಎನ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ನನ್ನ ಪ್ರಶ್ನೆಗೆ ಉತ್ತರ ಬಂದಿಲ್ಲ.

ಶ್ರೀ ಕಟ್ಟಾ ಸುಬ್ರಹ್ಮಣ್ಯ ನಾಯ್ಡು : ಮಾನ್ಯ ಅಧ್ಯಕ್ಷರೆ,

(ಗೊಂದಲ)

ಅಧ್ಯಕ್ಷರು : ಚಲುವರಾಯಸ್ವಾಮಿಯವರೆ, ನಾನು ಕರೆದಾಗ ತಾವು ಇರಲಿಲ್ಲ. ನಿಮ್ಮಗಳ ಪ್ರಶ್ನೆ ಲ್ಯಾಪ್ಸ್ ಆಗುವುದಿಲ್ಲ.

ಶ್ರೀ ಡಿ.ಬಿ. ಚಂದ್ರೇಗೌಡ : ಅಧ್ಯಕ್ಷರನ್ನೇ ಪ್ರಶ್ನೆ ಮಾಡುತ್ತಾ ಹೋದರೆ, ಸದನ ಹೇಗೆ ನಡೆಯಬೇಕು?

Mr. Speaker : You must co-operate, with me.

12.30 ಪಿಎಂ

ಆ) ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ದಿನಾಂಕ 10.07.2002ರಂದು ಲಿಖಿತ ಮೂಲಕ ಉತ್ತರಿಸುವ 47 ಪ್ರಶ್ನೆಗಳ ಪೈಕಿ 44 ಪ್ರಶ್ನೆಗಳಿಗೆ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು : ಅನುಬಂಧ I,II,III ಮಂಡಿಸಲಾಯಿತು.

ಕಾರ್ಯದರ್ಶಿಯವರ ವರದಿ

ಶ್ರೀ ಟಿ. ರಾಜಣ್ಣ (ಕಾರ್ಯದರ್ಶಿ) : ಕರ್ನಾಟಕ ವಿಧಾನಸಭೆ ಮಾನ್ಯ ಅಧ್ಯಕ್ಷರೆ, ವಿಧಾನಪರಿಷತ್ತಿನಿಂದ ಅಂಗೀಕೃತವಾದ ರೂಪದಲ್ಲಿರುವ ಈ ಕೆಳಕಂಡ ವಿಧೇಯಕಗಳನ್ನು ಸಭೆಯ ಮುಂದೆ ಮುಂದಿಡುತ್ತಿದ್ದೇನೆ.

1. ಕರ್ನಾಟಕ ನ್ಯಾಯವಾದಿಗಳ ಕಲ್ಯಾಣ ನಿಧಿ (ತಿದ್ದುಪಡಿ) ವಿಧೇಯಕ, 2002
2. ಕರ್ನಾಟಕ ನಿರಸನಗೊಳಿಸುವ ಮತ್ತು ತಿದ್ದುಪಡಿ ಮಾಡುವ ವಿಧೇಯಕ, 2002.

ಅಧ್ಯಕ್ಷರು : ಅನುಬಂಧ I,II,III ಮಂಡಿಸಲಾಯಿತು.